ಮೂಲ ದಾವಾ ಸಂಖ್ಯೆ 262/2014 ಡಿ ಡಬ್ಲ್ಯೂ 1 ಎ ಎನ್ ಶಿವಯೋಗಿ ಬಿನ್ ಲೇಟ್ ಬಸವರಾಜಪ್ಪ

(ದಿನಾಂಕ 10-07-2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣಿಕರಿಸಲಾಯಿತು.)

ಪಾಟೀ ಸವಾಲು ವಾದಿ ಪರ ಶ್ರೀ ಯು ಕೆ ವಕೀಲರಿಂದಃ-

ದಾವೆಯಲ್ಲಿ ನಾನು ಪ್ರತ್ಯೇಕವಾಗಿ ನನ್ನ ಪ್ರತಿವಾದ ಪತ್ರವನ್ನು ಸಲ್ಲಿಸಿರುವುದಿಲ್ಲವೆಂದರೆ ಸರಿ. ಸದರಿ ದಾವೆಯನ್ನು ವಾದಿ ದೇವಕ್ಕ ದಾಖಲುಪಡಿಸಿರುತ್ತಾರೆ. ನಾನು ಮೂಲತಃ ದಾವಣಗೆರೆ ವಾಸಿ ಎಂದರೆ ಸರಿ. ನನಗೆ ದಾವೆಯ ಬಗ್ಗೆ ವೈಯಕ್ತಿಕ ಮಾಹಿತಿ ಇರುವುದಿಲ್ಲವೆಂದರೆ ಸರಿಯಲ್ಲ.

ದಾವೆಯನ್ನು ದಾಖಲುಪಡಿಸುವ ಪೂರ್ವದಲ್ಲಿ ದಾಖಲಾತಿಗಳನ್ನು ಪರಿಶೀಲಿಸಲಾಗುತ್ತದೆಂದರೆ ಸರಿ. ನಾನು ದಾವಾ ಸ್ವತ್ತಿಗೆ ಸಂಬಂಧಿಸಿದಂತೆ ಪಹಣಿ, ಮ್ಯುಟೇಶನ್, ಹಕ್ಕು ಬಿಡುಗಡೆ ಪತ್ರ ದಾಖಲಾತಿಗಳನ್ನು ನೋಡಿರುತ್ತೇನೆ ಹಕ್ಕು ಬಿಡುಗಡೆ ಪತ್ರ ಬಸವಲಿಂಗನೌಡ ಬಿನ್ ರೆಡ್ಡಿ ದೊಡ್ಡಬಸವನಗೌಡ ಮತ್ತು ಅವರ ಸಹೋದರರು ಎಂಬ ಹೆಸರಿನಲ್ಲಿರುತ್ತದೆ. ರೆಡ್ಡಿ ದೊಡ್ಡಬಸವನಗೌಡರ ಸಹೋದರರು ಯಾರು ಎಂದು ನನಗೆ ಗೊತ್ತಿರುವುದಿಲ್ಲ. ಈ ವಿಷಯದ ಸಂಬಂಧ ನನ್ನ ಪ್ರಮಾಣಪತ್ರದಲ್ಲಿ ಬರೆಸಿರುವುದಿಲ್ಲವೆಂದರೆ ಸರಿ. ದಾವಾಸ್ತಿ ಸರ್ವೆ ನಂ.306 ರ ಒಟ್ಟು ವಿಸ್ತೀರ್ಣ 4 ಎಕರೆ 68 ಸೆಂಟ್ಸ ಇರುತ್ತದೆ. ದಾವಾಸ್ತಿ ಸರ್ವೆ ನಂ.7 ಬಿ/3 ರ ಒಟ್ಟು ವಿಸ್ತೀರ್ಣ 1 ಎಕರೆ 87 ಸೆಂಟ್ಸ ಇರುತ್ತದೆ.

ದಾವಾಸ್ತಿಯನ್ನು ನಾನು ಖರೀದಿಸುವ ಪೂರ್ವದಲ್ಲಿ ಅಳತೆ ಮಾಡಿಸಿರುವುದಿಲ್ಲ. ನಾನು ದಾವಾಸ್ತಿಯನ್ನು ಅಳತೆ ಮಾಡದೇ ಖರೀದಿಸಿರುವುದರಿಂದ

ನಾನು ಎಲ್ಲಿ ಆಸ್ತಿಯನ್ನು ಖರೀಸಿದ್ದೆ ಎಂಬ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲವೆಂದರೆ ಸರಿಯಲ್ಲ. ದಾವಾಸ್ತಿ ಸರ್ವೆ ನಂ. 306 ರ 5 ಎಕರೆ 51 ಸೆಂಟ್ಸ ಸ್ವತ್ತಿನ ಯಾವ ಭಾಗದಲ್ಲಿ ನಾನು ಆಸ್ತಿಯನ್ನು ಖರೀದಿಸಿರುತ್ತೇನೆಂದು ನನಗೆ ಗೊತ್ತಿರುವುದಿಲ್ಲ, ದಾವಾಸ್ತಿ ಸರ್ವೆ ನಂ.7 ಬಿ/3 ರ ಒಟ್ಟು ವಿಸ್ತೀರ್ಣ 3 ಎಕರೆ 75 ಸೆಂಟ್ಸನ ಯಾವ ಭಾಗದಲ್ಲಿ ನಾನು ಆಸ್ತಿಯನ್ನು ಖರೀದಿಸಿರುತ್ತೇನೆಂದು ನನಗೆ ಗೊತ್ತಿರುವುದಿಲ್ಲ, ಕಾರಣ ನಾನು ಖರೀದಿಸಿದಂತಹ ಸ್ವತ್ತು ಸದರಿ ಎರಡೂ ಸರ್ವೆ ಸಂಖ್ಯೆಗಳ ಪೈಕಿ ಎಲ್ಲಿ ಬರುತ್ತದೆಂದು ನನಗೆ ಗೊತ್ತಿರುವುದಿಲ್ಲವೆಂದರೆ ಸರಿ.

ನಾನು ದಾವಾಸ್ತಿಗಳನ್ನು ಖರೀದಿಸುವ ಪೂರ್ವದಲ್ಲಿ ದಿ:09-05-1963 ರಂದು ವಾದಿಯ ಗಂಡ ಪಿ ವೀರನಗೌಡ ಮತ್ತು 1 ನೇ ಪ್ರತಿವಾದಿಯ ಗಂಡ ಆರ್ ಪಂಪನಗೌಡ ಇವರು ನೊಂದಾಯಿತ ಕ್ರಯಪತ್ರದ ಮೂಲಕ ರೂ400/- ಗಳ ಪ್ರತಿಫಲಕ್ಕೆ ಅಡಿವೆಪ್ಪ ಮತ್ತು ಕೆಂಚಪ್ಪ ರಿಂದ ಖರೀದಿ ಮಾಡಿದ್ದರೆನ್ನುವ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ಈ ಸಂಗತಿಯ ಬಗ್ಗೆ ನನಗೆ ಸಂಪೂರ್ಣ ಮಾಹಿತಿ ಇದ್ದರೂ ಮಾಹಿತಿ ಇಲ್ಲವೆಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ.

ವಾದಿಯು ದಾವಾಸ್ವತ್ತಿನಲ್ಲಿ ಸ್ವಾಧೀನತೆ ಇರುತ್ತಾರೆಂದರೆ ಸರಿಯಲ್ಲ. 1963 ನೇ ಸಾಲಿನಿಂದ ಇಂದಿಗೂ ವಾದಿಗೆ ಸೇರತಕ್ಕಂತಹ ಅರ್ಧ ಭಾಗದಲ್ಲಿ ವಾದಿಯು ಸ್ವಾಧೀನತೆಯಲ್ಲಿರುತ್ತಾರೆಂದರೆ ಸರಿಯಲ್ಲ. ನಾನು ದಾವಾ ಸರ್ವೆ ನಂಬರಿನ ಎರಡು ಸ್ವತ್ತುಗಳಲ್ಲಿ ಯಾವ ಭಾಗದಲ್ಲಿ ನಿಖರವಾಗಿ ಸ್ವಾಧೀನತೆಯನ್ನು ಹೊಂದಿರುತ್ತೇನೆಂದು

ಹೇಳಲು ಆಗುವುದಿಲ್ಲ. ನಾನು ದಾವಾ ಜಮೀನುಗಳನ್ನು ನೋಡಿರುವುದಿಲ್ಲವೆಂದರೆ ಸರಿಯಲ್ಲ, ಕೇವಲ ಪಹಣಿಯಾಧಾರದ ಮೇಲೆ ನಾನು ದಾವಾ ಸ್ವತ್ತುಗಳನ್ನು ಖರೀದಿಸಿರುತ್ತೇನೆಂದರೆ ಸರಿಯಲ್ಲ.

ಮೂಲತಃ ದಾವಾಸ್ತಿಗಳು ಯಾರಿಗೆ ಸೇರಿರುತ್ತವೆಂದು ನನಗೆ ಗೊತ್ತಿರುವುದಿಲ್ಲ, ಬಸವನಗೌಡರಿಗೆ ಮಾತ್ರ ಸೇರಿರುತ್ತದೆಂದು ನನಗೆ ಗೊತ್ತಿರುತ್ತದೆ. ಬಸವನಗೌಡರಿಗೆ ದಾವಾ ಸ್ವತ್ತುಗಳು ಹೇಗೆ ಬಂದಿರುತ್ತವೆಂದು ನನಗೆ ಗೊತ್ತಿರುವುದಿಲ್ಲವೆಂದರೆ ಸರಿ. ವಾದಿಯ ವಾದಪತ್ರದಲ್ಲಿ ಬರೆದಿರುವ ಸಂಗತಿಯ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ.

ನಾನು ದಾವಾಸ್ತಿಗಳನ್ನು ನಾಗರಾಜ ಬಿನ್ ಸುಬ್ಬರಾಯುಡುರವರಿಂದ ಖರೀದಿ ಮಾಡಿರುತ್ತೇನೆ. ದಾವಾಸ್ತಿಗಳನ್ನು ಮಾರಾಟ ಮಾಡುವ ಬಗ್ಗೆ ನನ್ನ ಸ್ನೇಹಿತರಾದ ನಾಗರಾಜ ಬಿನ್ ಸುಬ್ಬರಾಯುಡು ಡಿ ಡಬ್ಲ್ಯೂ2 ರವರು ಜಮೀನು ಖರೀದಿಸುವ ಪೂರ್ವದಲ್ಲಿ ಅಂದರೆ 2011 ನೇ ಸಾಲಿನಲ್ಲಿ ಮಾಹಿತಿ ಕೊಟ್ಟರು. ನಾನು ಮಾತುಕತೆಗಾಗಿ ದಾವಣಗೆರೆಯಿಂದ ಹೆಚ್ ಬಿ ಹಳ್ಳಿಗೆ ಬಂದಿದ್ದೆ. ಸದರಿ ವ್ಯಕ್ತಿಯ ಕಟಿಂಗ್ ಶಾಪಿನಲ್ಲಿಯೇ ದಾವಾ ಖರೀದಿ ಸಂಬಂಧ ಮಾತುಕತೆಯಾಗಿತ್ತು. ಪ್ರತಿ ಎಕರೆಗೆ ರೂ.1,10,000/- ದಂತೆ ಮಾತುಕತೆಯಾಯಿತು. ನಾನು ಅವರಿಗೆ ಒಟ್ಟು ರೂ.2 ಲಕ್ಷಕ್ಕಿಂತ ಸ್ವಲ್ಪ ಕಡಿಮೆ ಹಣವನ್ನು ಕೊಟ್ಟಿದ್ದೆ. ಮುಂಗಡವಾಗಿ ರೂ.10 ಸಾವಿರ ಹಣ ಕೊಟ್ಟಿದ್ದು ಆ ನಂತರ ನೊಂದಣಿ ಸಮಯದಲ್ಲಿ ಪೂರ್ತಿ ಹಣವನ್ನು ಕೊಟ್ಟಿರುತ್ತೇನೆ. ಈ ವಿಷಯವನ್ನು ನಾನು ನನ್ನ

ಪ್ರಮಾಣಪತ್ರದಲ್ಲಿ ಹೇಳಿ ಬರೆಸಿರುವುದಿಲ್ಲ ನಾನು ದಾಖಲಾತಿಗಳನ್ನು ಖರೀದಿ ಸಮಯದಲ್ಲಿ ನೋಡಿರುವುದಿಲ್ಲ ಆದರೆ ನಂಬಿಕೆಯ ಮೇಲೆ ದಾವಾ ಸ್ವತ್ತುಗಳನ್ನು ಖರೀದಿ ಮಾಡಿರುತ್ತೇನೆ. ಖರೀದಿ ಪೂರ್ವದಲ್ಲಿ ನಾನು ದಾವಾ ಸ್ವತ್ತುಗಳ 11 ಇ ಸ್ಕೆಚ್ಚುಗಳನ್ನು ನೋಡಿರುತ್ತೇನೆ. ನಾನು ಸದರಿ ದಾವಾ ಸ್ವತ್ತುಗಳಿಗೆ ಹೋಗಿದ್ದು ಆದರೆ ಖರೀದಿ ಪೂರ್ವದಲ್ಲಿ ಜಮೀನಿನ ಅಳತೆ ಮಾಡಿಸಿರುವುದಿಲ್ಲ. ನಾನು ಖರೀದಿ ಪೂರ್ವದಲ್ಲಿ ದಾವಾ ಸ್ವತ್ತನ್ನು ನೋಡದೇ ನನ್ನ ಸ್ನೇಹಿತನ ಜೊತೆ ದಾಖಲಾತಿಗಳನ್ನು ಸೃಷ್ಟಿಸಿ ಖರೀದಿ ಮಾಡಿರುತ್ತೇನೆಂದರೆ ಸರಿಯಲ್ಲ, ಸಾಕ್ಷಿ ಮುಂದುವರೆದು ಸರಹದ್ದು ಎಲ್ಲಿ ಬರುತ್ತದೆಂದು ಗೊತ್ತಿರುವುದಿಲ್ಲವೆಂದು ನುಡಿಯುತ್ತಾರೆ. ನಾಗರಾಜ್, ಪ್ರವೀಣ್ ಪಾಟೀಲ್, ಪಿ ಜಿ ನಾಗರಾಜ್ ಬಿನ್ ಗಿಡ್ಡಯ್ಯ, ನರಸಿಂಹಮೂರ್ತಿಗಾಗಲೀ ದಾವಾಸ್ವತ್ತುಗಳನ್ನು ಕಾನೂನುಬದ್ಧವಾಗಿ ಮಾರಾಟ ಮಾಡುವಂತಹ ಹಕ್ಕು ಅಧಿಕಾರ ಇರುವುದಿಲ್ಲವೆಂದರೆ ಸರಿಯಲ್ಲ. ಕಾರಣ ಸದರಿ ನಿಡಿ-3 ರ ಪ್ರಕಾರ ದಾವಾಸ್ವತ್ತುಗಳಲ್ಲಿ ಯಾವುದೇ ಮಾಲೀಕತ್ವದ ಮತ್ತು ಸ್ವಾಧೀನತೆಯ ಹಕ್ಕು ಉಂಟಾಗುವುದಿಲ್ಲವೆಂದರೆ ಸರಿಯಲ್ಲ.

ಮರು ವಿಚಾರಣೆ - ಇಲ್ಲ.

(ಮುಕ್ತ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು.)

ಸಿವಿಲ್ ಜಡ್ಜ ಮತ್ತು ಜೆ ಎಂ ಎಫ್ ಸಿ
ಹಗರಿಬೊಮ್ಮನಹಳ್ಳಿ